ವ್ಯಾಪಾರಿ ಲಾಭ	೭೧.೯೮
ಸವಕಳಿ	೧೩೬.೦೭
ನಿವ್ವಳ ನಷ್ಟ	(೬೪.೦೯)

೧೯೮೭-೮೮ನೇ ಸಾಲಿನ ವ್ಯವಹಾರದ ವಿವರ (ತಾತ್ಕಾಲಿಕ)

	ಆದಾಯ	ವೆಚ್ಚ
	(ಲಕ್ಷ ರೂ. ಗಳಲ್ಲಿ)	
೧) ಸಾರಿಗೆ ವಿಭಾಗ	೧೬೯.೪೪	೧೪೩.೪೧
೨) ಹೋಟೆಲ್ ವಿಭಾಗ	೧೬೧.೯೩	೧೧೮.೯೫
೩) ಇತರೆ	...	೩೮.೫೦
ಒಟ್ಟು	೩೩೧.೮೭	೩೦೦.೮೬
ವ್ಯಾಪಾರಿ ಲಾಭ	೩೧.೦೧	
ಸವಕಳಿ	೧೨.೩೬	
ನಿವ್ವಳ ಲಾಭ	೧೮.೬೫	

ಸಂಬ್ರಮಣ್ಯ ನಗರ ಕೆರೆ ಅಂಗಳದ ಬಗ್ಗೆ

೪೦೨೫ ಶ್ರೀ ಎಂ. ಎಸ್. ಕೃಷ್ಣನ್, (ರಾಜಾಜಿನಗರ).—ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಲ್ಲೇಶ್ವರದಿಂದ ರಾಜಾಜಿನಗರ ೧೭ನೇ ಕ್ರಾಸ್‌ನಲ್ಲಿ ಹೋಗುವ ರೋಡ್ ಬ್ರಿಡ್ಜ್ ಪಕ್ಕದಲ್ಲಿ ಕೆರೆ ಅಂಗಳ ಇಕ್ಕೆಲೆಗಳಲ್ಲಿಯೂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಇವೆರಡನ್ನು ಆಟದ ಮೈದಾನವಾಗಿ ಅಥವಾ ಉದ್ಯಾನವನವನ್ನಾಗಿ ಮಾಡಬೇಕೆಂದು ಶಾಸಕರೂ, ನಾಗರೀಕರೂ ಹಲವಾರು ವರ್ಷಗಳಿಂದ ಒತ್ತಾಯ ಮಾಡುತ್ತಿರುವುದು ನಿಜವೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಮಹಾನಗರ ಪಾಲಿಕೆಯವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್. ವಿ. ದೇಶಪಾಂಡೆ, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಹೌದು.

ಆ) ಹೌದು.

ಇ) ಕೇತಮಾರನಹಳ್ಳಿ ಸ. ನಂ. ೨೭ರಲ್ಲಿ ೮ ಎಕರೆ ೫೦ ಗುಂಟೆ ಜಮೀನನ್ನು ಆಟದ ಮೈದಾನವನ್ನಾಗಿ ಮತ್ತು ಹೂ ತೋಟವನ್ನಾಗಿ ಅಭಿವರ್ಧಿಸಲು ತೊಡಗಿದಾಗ ಶ್ರೀ ಜಯಸೂರ್ಯ ಮತ್ತು ಇತರರು ನ್ಯಾಯಾಲಯದಲ್ಲಿ ದಾವೆ ಹೂಡಿ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ.

ನ್ಯಾಯಾಲಯದಲ್ಲಿ ಈ ಪ್ರಕರಣವೂ ಇನ್ನೂ ವಿಚಾರಣೆಯಲ್ಲಿದೆ. ತಡೆಯಾಜ್ಞೆಯನ್ನು ತೆರವು ಮಾಡಲು ನಗರ ಪಾಲಿಕೆಯು ಕ್ರಮವನ್ನು ಕೈಗೊಂಡಿರುತ್ತದೆ.